**ಓ.ಎಸ್ ನಂ. 39/2023** **ಪಿ.ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕ 4.4.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಟಿ.ಕೆ ವಕೀಲರಿಂದಃ**

ನಾನು ಊರಿನಲ್ಲಿ ಸೇರಿಸಿದ್ದ ಪಂಚಾಯಿತಿಯಲ್ಲಿ ಮಹದೇವಪ್ಪ ಮತ್ತು ಊರಿನ ಇತರರು ಭಾಗವಹಿಸಿದ್ದರು. ಊಯ್ಯಂಬಳ್ಳಿ ಮತ್ತು ಬಿದರಹಳ್ಳಿ ಗ್ರಾಮ ಬೇರೆ ಬೇರೆ ಗ್ರಾಮಗಳು ಎಂದರೆ ಸರಿ. ಸದರಿ ಗ್ರಾಮಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಸರ್ವೆ ನಂ. ಆಸ್ತಿಗಳು ಇರುತ್ತವೆ ಎಂದರೆ ಸರಿ. ನಾನು ಈ ದಾವೆಯಲ್ಲಿ ಬಿದರಹಳ್ಳಿ ಗ್ರಾಮದ ಸರ್ವೆ ನಂಬರಿಗೆ ದಾಖಲಿಸಿರುತ್ತೇನೆ. ನಾನು ಹೇಳಿರುವ ಚೆಕ್ಕುಬಂದಿಯ ಒಳಗೆ ಬಿದರಹಳ್ಳಿ ಗ್ರಾಮದ ಸರ್ವೆ ನಂ. 83 ಬರುತ್ತದೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ನಾನು ದಾವೆಯಲ್ಲಿ ಹೇಳಿರುವ ಚೆಕ್ಕುಬಂದಿಯಲ್ಲಿರುವ ವ್ಯಕ್ತಿಗಳನ್ನು ಹೊರತುಪಡಿಸಿ ಬೇರೆ ಯಾರೂ ಸದರಿ ಚೆಕ್ಕುಬಂದಿಯಲ್ಲಿ ಇರುವುದಿಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಕಾಡು ಪ್ರದೇಶ ಇತ್ತು ಎಂದರೆ ಸಾಕ್ಷಿದಾರರು ಮೊದಲು ಇತ್ತು ಎನ್ನುವರು. ಕೆಲವು ಜಮೀನು ಸಾಗುವಳಿ ಮೂಲಕ ಮಂಜೂರಾಗಿದ್ದು, ಮಂಜೂರು ಆಗಿರುವ ಆಸ್ತಿಯಲ್ಲಿ ಕೆಲವರು ಸ್ವಾಧೀನದಲ್ಲಿ ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ ಎನ್ನುವರು. ನನಗೆ ಸಾಗುವಳಿ ಜಮೀನು ಮಾತ್ರ ನೀಡಿದ್ದು ನಾನು ಈ ವರೆಗೂ ದಾವಾ ಆಸ್ತಿ ಅಥವಾ ಇತರ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಹಿಂದೆ ಅಸಲು ದಾವಾ ಸಂ. 11/2015 ರಲ್ಲಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯ ಅಕ್ಕ ಪಕ್ಕದಲ್ಲಿರುವ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ನಾನು ಈ ಹಿಂದೆ ಸಾಕ್ಷಿ ನುಡಿದಾಗ ಸರ್ವೆ ನಂಬರ್ 83/2 ರ ಪಕ್ಕದಲ್ಲಿ ನನಗೆ ಸೇರಿದ ಸರ್ವೆ ನಂಬರ್ 83 ರಲ್ಲಿ 4 ಎಕರೆ ಜಮೀನು ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿದಾರರು ಸರ್ವೆ ನಂಬರ್ 83 ರಲ್ಲಿ ನನ್ನ ಜಮೀನು ಇರುತ್ತದೆ ಎಂದು ಹೇಳಿರುತ್ತೇನೆ ಎನ್ನುವರು. ನನ್ನ ಜಮೀನಿನ ಉತ್ತರ ದಿಕ್ಕಿನಲ್ಲಿ ಪದ್ಮ ಪ್ರಸಾದ್ ಅವರ ಜಮೀನು ಇರುತ್ತದೆ. ಸದರಿ ದಾವೆಯಲ್ಲಿ ಸರ್ವೆ ನಂಬರ್ 83/2 ರ ದಕ್ಷಿಣ ದಿಕ್ಕಿನಲ್ಲಿ ನನಗೆ ಮತ್ತು ನಾಗಮ್ಮ ಅವರಿಗೆ ಸಂಬಂಧಪಟ್ಟ ಜಮೀನು ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿದಾರರು ನೆನಪು ಇರುವುದಿಲ್ಲ ಎನ್ನುವರು. ನಾನು ವಾಸ್ತವಿಕವಾಗಿ ಜಮೀನಿನ ಸ್ವಾಧಿನದಲ್ಲಿ ಇಲ್ಲದಿರುವುದರಿಂದ ನನ್ನ ಜಮೀನು ಎಂದು ಹೇಳುವ ಆಸ್ತಿಯ ಅಕ್ಕ ಪಕ್ಕದಲ್ಲಿರುವ ವ್ಯಕ್ತಿಗಳ ಹೆಸರು ಮತ್ತು ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾಗಮ್ಮ ಅವರ ಜಮೀನಿನ ಸರ್ವೆ ನಂಬರ್ 189 ಆಗಿರುತ್ತದೆ. ಮೇಲೆ ಹೇಳಿದ ದಾವೆಯಲ್ಲಿ ನಾಗಮ್ಮ ಅವರ ಜಮೀನಿನ ಸರ್ವೆ ನಂಬರ್ 769 ಆಗಿರುತ್ತದೆ ಎಂದು ಹೇಳಿರುತ್ತೇನೆ

ಎಂದರೆ ಸಾಕ್ಷಿದಾರರು ಸದರಿ ಆಸ್ತಿ ಪೋಡು ಆಗಿದ್ದು ಸರ್ವೆ ನಂಬರ್ ಅನ್ನು ಮರೆತಿರುತ್ತೇನೆ ಎನ್ನುವರು. ಸಾಮಾನ್ಯವಾಗಿ ಆಸ್ತಿ ದುರಸ್ತಿ ಆಗದೇ ಇದ್ದರೆ ಯಾರ ಆಸ್ತಿ ಎಲ್ಲಿ ಇರುತ್ತದೆ ಮತ್ತು ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ಗೊತ್ತಾಗಿರುವುದಿಲ್ಲ ಎಂದರೆ ಸಾಕ್ಷಿದಾರರು ಜಮೀನು ಮಂಜೂರಾದಾಗ ನನಗೆ ತಹಸೀಲ್ದಾರರು ನನ್ನ ಜಮೀನನ್ನು ತೋರಿಸಿಕೊಟ್ಟಿರುತ್ತಾರೆ ಎನ್ನುವರು. ತಹಸೀಲ್ದಾರರು ಜಾಗವನ್ನು ಗುರುತಿಸಿ ಕೊಟ್ಟಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

ಪ್ರತಿವಾದಿಯು ಹಾಕಿರುವ ಲಿಖಿತ ಹೇಳಿಕೆಯನ್ನು ನಾನು ತಿಳಿದುಕೊಂಡಿರುವುದಿಲ್ಲ. ದಿನಾಂಕಃ 11.07.2018 ರಲ್ಲಿ ಊಯ್ಯಂಬಳ್ಳಿ ಗ್ರಾಮದ ಸರ್ವೆ ನಂ. 136/1 ರಲ್ಲಿ 3 ಎಕರೆ ಮತ್ತು 136/3 ರಲ್ಲಿ 20 ಗುಂಟೆ ಜಮೀನನ್ನು ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಆ ರೀತಿ ಖರೀದಿ ಮಾಡಿದ ನಂತರ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಇರಬಹುದು ಎನ್ನುವರು. ಅವರು ಖರೀದಿ ಮಾಡಿದ ದಿನದಿಂದ ಈ ವರೆಗೂ ಖರೀದಿಸಿದ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಇರಬಹುದು ಎನ್ನುವರು. ಪ್ರತಿವಾದಿಯು ಖರೀದಿ ಮಾಡಿರುವ ಸರ್ವೆ ನಂಬರ್ 136/1 ರ ಜಮೀನಿನ ಅಕ್ಕ ಪಕ್ಕದಲ್ಲಿ ಕಾಡು ಜಮೀನು ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯು ಖರೀದಿ ಮಾಡಿರುವ ಸರ್ವೆ ನಂಬರ್ 136/1 ರಲ್ಲಿ ಪೂರ್ವಕ್ಕೆಃ ಸರ್ಕಾರಿ ರಸ್ತೆ, ಪಶ್ಚಿಮಕ್ಕೆಃ ಶಿವಸಿದ್ದಯ್ಯ ಅವರ ಜಮೀನು, ಉತ್ತರಕ್ಕೆಃ ವಿರೂಪಾಕ್ಷ ಅವರ ಜಮೀನು ಮತ್ತು ದಕ್ಷಿಣಕ್ಕೆಃ ದಾಸಬೋವಿ ಅವರ ಜಮೀನು ಇರುತ್ತದೆ ಎಂದರೆ ಸಾಕ್ಷಿದಾರರು ಇರಬಹುದು ಎನ್ನುವರು. ಸರ್ವೆ ನಂಬರ್ 136/3 ರ 20 ಗುಂಟೆ ಜಮೀನಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಸರ್ಕಾರಿ ರಸ್ತೆ ಮತ್ತು ದಕ್ಷಿಣಕ್ಕೆ ದಾಸಬೋವಿ ಅವರ ಜಮೀನು ಇತ್ತು ಎಂದರೆ ನನಗೆ ನೆನಪಿರುವುದಿಲ್ಲ. ಪ್ರತಿವಾದಿಯ ಮೇಲೆ ಹೇಳಿದ ಎರಡು ಜಮೀನುಗಳನ್ನು ಖರೀದಿಸಿದಾಗ ಅಕ್ಕ ಪಕ್ಕದಲ್ಲಿ ಯಾರೂ ವ್ಯವಸಾಯ ಮಾಡುತ್ತಿರಲಿಲ್ಲ, ಅದು ಕಾಡು ಪ್ರದೇಶ ಆಗಿತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನ ಅಕ್ಕ ಪಕ್ಕದಲ್ಲಿ ಈಗ ಬೇರೆಯವರು ತಮ್ಮ ಜಮೀನು ಎಂದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 136/1 ರ ಜಮೀನಿನ ಈಗಿನ ಚೆಕ್ಕುಬಂದಿ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ಶಿವಬಸಯ್ಯ ಮತ್ತು ಅವರ ಕುಟುಂಬದವರ ಜಮೀನು ಇರುತ್ತದೆ ಎಂದರೆ ಸರಿ. ಉತ್ತರಕ್ಕೆಃ ನಾಗಮ್ಮರವರ ತಂದೆಯ ಹೆಸರಿನಲ್ಲಿ ಜಮೀನು ಇದ್ದು ಈಗ ಅವರ ಮಗಳು ನಾಗಮ್ಮ ಅವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿದಾರರು ಉತ್ತರ ದಿಕ್ಕಿಗೆ ನನ್ನ ಜಮೀನು ಇರುತ್ತದೆ ಎನ್ನುವರು. ನನಗೆ ಸಾಗುವಳಿ ಚೀಟಿ ಮಂಜೂರಾಗಿರುತ್ತದೆ ಎಂಬ ಒಂದೇ ಕಾರಣಕ್ಕೆ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲದಿದ್ದರೂ ಮತ್ತು ನನ್ನ ಆಸ್ತಿ ಎಲ್ಲಿ ಬರುತ್ತದೆ ಎಂದು ಗೊತ್ತಿರದಿದ್ದರೂ ಸಹ ಪ್ರತಿವಾದಿ

ಸ್ವಾಧೀನದಲ್ಲಿರುವ ಜಮೀನಿನಲ್ಲಿ ನನ್ನ ಜಮೀನು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನನ್ನು ಗುರುತಿಸಿಕೊಳ್ಳಲು ಈ ವರೆಗೂ ಅಳತೆ

ಮಾಡಿರುವುದಿಲ್ಲ ಆದರೆ ಅರ್ಜಿ ನೀಡಿರುತ್ತೇನೆ. ನಾನು ಯಾವುದೇ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ, ನಾನು ವ್ಯವಸಾಯಗಾರನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ವ್ಯವಸಾಯ ಮಾಡುತ್ತಿರುವ ಜಮೀನನ್ನು ನಾನು ನೋಡಿರುತ್ತೇನೆ. ಈಗ ನೋಡುತ್ತಿರುವ 8 ಭಾವಚಿತ್ರಗಳಲ್ಲಿರುವ ಜಮೀನು ಪ್ರತಿವಾದಿಯ ಜಮೀನು ಎಂದರೆ ಸರಿ. ಸಾಕ್ಷಿದಾರರು ಅವುಗಳನ್ನು ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿಡಿ 1 ರಿಂದ 8 ಎಂದು, ಸಿಡಿಯನ್ನು ನಿಡಿ 9 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರಗಳಲ್ಲಿರುವ ಜಮೀನಿಗೂ ನನ್ನ ಜಮೀನಿಗೂ ಯಾವುದೇ ಸಂಬಂಧ ಇರುವುದಿಲ್ಲ. ಪ್ರತಿವಾದಿಯು ಹೆಚ್.ಡಿ.ಕೋಟೆಯಲ್ಲಿ ವಾಸವಾಗಿರುವುದರಿಂದ ಸದರಿ ಜಮೀನನ್ನು ವ್ಯವಸಾಯ ಮಾಡಲು ವಾಸದ ಮನೆಯನ್ನು ನಿರ್ಮಿಸಿದ್ದು ಅಲ್ಲಿ ಕೂಲಿ ಆಳುಗಳು ಸಂಸಾರ ಸಮೇತ ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನ್ನು ಅಭಿವೃದ್ದಿ ಪಡಿಸಲು ಪ್ರಧಾನಮಂತ್ರಿ ಸಿಂಚಾಯಿ ಯೋಜನೆ ಅಡಿಯಲ್ಲಿ ಹನಿ ನೀರಾವರಿ, ಪ್ಯಾಕ್ ಹೌಸ್, ಹಂಗಾಮಿ ಬೆಳೆಗೆ ಸಹಾಯ ಧನ ಸಹಾಯವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಸರ್ವೆ ನಂಬರ್ 136/1 ಮತ್ತು 136/3 ರ ಜಮೀನಿಗೆ ಪಡೆದುಕೊಂಡಿರುತ್ತಾರೆ ಎನ್ನುವರು. ನಾನು ದಾವೆಯಲ್ಲಿ ಹೇಳಿರುವ ಚೆಕ್ಕುಬಂದಿಯಲ್ಲಿ ಪ್ರತಿವಾದಿಗೆ ಸಂಬಂಧಪಟ್ಟ ಜಮೀನು ಇರುತ್ತದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.)

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.